9.	ಮಂಡ್ಯ	313
10.	ಮಡಿಕೇರಿ	136
11.	ಹಾಸನ	384
12.	ಚಿಕ್ಕಮಗಳೂರು	186
13.	ದಕ್ಷಿಣ ಕನ್ನಡ	912
14.	ಬೆಳಗಾವಿ	722
15.	ಬಿಜಾಪುರ	576
16.	ಧಾರವಾಡ	1213
17.	ಉತ್ತರಕನ್ನಡ	385
18.	ಗುಲ್ಬರ್ಗ	404
19.	ಬೀದರ್	595
20.	ರಾಯಚೂರು	310
21.	ಬಳ್ಳಾರಿ	495
ಕಪ್ಪು ಹಲಗೆ ಕಾರ್ಯಾಚರಣೆಗೆ 5 ಮತ್ತು 6ನೇ ಹಂತದಲ್ಲಿ ಮಂಜೂರಾದ ಹುದ್ದೆಗಳು		3195
	ಒಟ್ಟು	13170

ಅ) ಮುಂದಿನ ಶೈಕ್ಷಣಿಕ ವರ್ಷದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.

ಇ) ಖಾಲಿ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡುವುದರಿಂದ ತಾತ್ಕಾಲಿಕವಾಗಿ ನೇಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಯವರ ನೇಮಕ ಆಗದಿರುವ ಬಗ್ಗೆ

985 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಪುತ್ತೂರು ಉಪ್ಪಿನಂಗಡಿ ಹಾಗೂ ಪಾಣಾಜೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರ ನೇಮಕ ಇನ್ನೂ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಸದರಿ ಆರೋಗ್ಯ ಕೇಂದ್ರಗಳಿಗೆ ಯಾವಾಗ ವೈದ್ಯಾಧಿಕಾರಿಗಳನ್ನು ನೇಮಿಸಲಾಗುವುದು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಬಂದಿದೆ. ಪಾಣಾಜೆ ಆರೋಗ್ಯ ಕೇಂದ್ರದಲ್ಲಿ ಎರಡು ವೈದ್ಯರ ಹುದ್ದೆಗಳು ಖಾಲಿ ಇದ್ದು ಅದರಲ್ಲಿ 1 ಹುದ್ದೆಗೆ ದಿನಾಂಕ 10-2-95ರಂದು ಗುತ್ತಿಗೆ ಆಧಾರದ

ವೈದ್ಯರನ್ನು ನೇಮಕಾತಿ ಮಾಡಲಾಗಿದೆ. ಮತ್ತೊಂದು ಖಾಲಿ ಹುದ್ದೆಯನ್ನು ಆದಷ್ಟು ಜಾಗ್ರತೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಆ) ಪುತ್ತೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಉಪ ಶಸ್ತ್ರ ಚಿಕಿತ್ಸಕರ ಹುದ್ದೆ ಖಾಲಿ ಇದ್ದು ಈ ಹುದ್ದೆಯನ್ನು ಹಾಗೂ ಉಪ್ಪಿನಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ಹುದ್ದೆಯನ್ನು ತುಂಬಲು ಸಾರ್ವಜನಿಕ ವರ್ಗಾವಣೆ ಸಮಯದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆ ಭರ್ತಿ ಮಾಡುವ ಬಗ್ಗೆ

1233 - ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ಕ್ಷೇತ್ರದ ಈ ಕೆಳಗಿನ ಜೂನಿಯರ್‌ಕಾಲೇಜುಗಳಲ್ಲಿ ಗೋಳಿ ಅಂಗಡಿ, ಶಂಕರನಾರಾಯಣ, ಬಿದ್ಕಲಕಟ್ಟೆ, ಕೋಟೇಶ್ವರ. ಕುಂದಾಪುರ ಇವುಗಳಲ್ಲಿ ಕೊರತೆಯಿರುವ ಉಪನ್ಯಾಸಕರ ಸಂಖ್ಯೆ ಎಷ್ಟು?*

ಆ) *ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು?*

ಶ್ರೀ ಹೆಚ್.ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ)

ಗೊಳಿಯಂಗಡಿ	1
ಶಂಕರನಾರಾಯಣ	1
ಬಿದ್ಕಲಕಟ್ಟೆ	-
ಕೋಟೇಶ್ವರ	1
ಕುಂದಾಪುರ	1

ಆ)

ಗೊಳಿಅಂಗಡಿ	7
ಶಂಕರನಾರಾಯಣ	10
ಬಿದ್ಕಲಕಟ್ಟೆ	10
ಕೋಟೇಶ್ವರ	11
ಕುಂದಾಪುರ	9
	47

ಇ) ದಿನಾಂಕ 29-03-1995ರಲ್ಲಿ 477 ಜನ ಪ್ರೌಢ ಶಾಲಾ ಸಹಶಿಕ್ಷಕರಿಗೆ ಉಪನ್ಯಾಸಕರಾಗಿ ಸ್ಥಾನವನ್ನು ಬಡ್ತಿ ನೀಡಲಾಗದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

1234 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಂದಾಪುರ ಕ್ಷೇತ್ರದ ಆರ್ಡಿ. ಗೋಳಿಯಂಗಡಿ. ಆಮಸೆಬೈಲು. ಶಂಕರನಾರಾಯಣ, ಹೊಸಂಗಡಿ, ಆಂಡಾರು, ಕೋಟೇಶ್ವರ, ಬನ್ಸೂರು, ಕುಂದಾಪುರ, ಹಾಲ್ಹಾಡಿ, ಕೆದೂರು, ವಕ್ವಾಡಿ, ಪೇಳೂರು ಈ ಸ್ಥಳಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಕೊರತೆಯಿರುವ ಅಧ್ಯಾಪಕರ ಸಂಖ್ಯೆ ಎಷ್ಟು?*